**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.**

**ಸಿ.ಸಿ. ನಂ.115/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಖಾದರಬಾಷಾಸಾಬ @ ಬಾಷಾಸಾಬ | ಸಿ.ಡಬ್ಲ್ಯೂ ಃ 01 |
| ತಂದೆ ಹೆಸರು | ಃ ಹಿಮಾಮಸಾಬ | ಪಿ.ಡಬ್ಲ್ಯೂ ಃ 01 |
| ವಯಸ್ಸು | ಃ 56 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಹದನೂರು | |

**ಸಾಕ್ಷಿಗೆ ಇಂದು ದಿನಾಂಕಃ 09.09.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-4 ರಿಂದ 6 ರವರ ಪರಿಚಯ ಇದೆ. ಚಾಸಾ-7 ಮತ್ತು 8 ರವರು ನನ್ನ ಮಕ್ಕಳು ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಪರಿಚಯ ಇರುತ್ತಾರೆ. ದಿನಾಂಕ 21.02.2019 ರಂದು ಬೆಳಿಗ್ಗೆ 10 ಗಂಟೆ ಸಮಾರಿಗೆ ನಾನು, ಚಾಸಾ-4 ರಿಂದ 6 ರವರು ನಮ್ಮ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ, ಆರೋಪಿತರು ಬಂದು ಶ್ರೀಗಂಧದ ಕಟ್ಟಿಗೆಗಳನ್ನು ಕಳ್ಳತನ ಮಾಡುತ್ತೇವೆ ಎಂದು ಊರಿನಲ್ಲಿ ಕರೆ ಮಾಡಿ ಹೇಳುತ್ತೀಯಾ ಮಗನೆ ಅಂತ ಅಂದವರೆ ಆರೋಪಿತರೆಲ್ಲರೂ ಸೇರಿ ನನ್ನನ್ನು ಹೊಡೆಯಲು ಪ್ರಾರಂಭಿಸಿದರು. ನನ್ನ ಮಗನಾದ ಚಾಸಾ-8 ರವರು ನನ್ನ ತಂದೆಗೆ ಯಾಕೆ ಹೊಡೆಯುತ್ತಿದ್ದೀರಿ ಎಂದು ಕೇಳಲು ಆರೋಪಿತರು ನನ್ನ ಮಗನಿಗೂ ಸಹಿತ ಹೊಡೆದಿರುತ್ತಾರೆ. ನನಗೆ ಆರೋಪಿ ನಂ.1, 2, 4 ಮತ್ತು 5 ರವರು ಕಟಿಟ್ಟಗೆಯಿಂದ, ಕೈಯಿಂದ ಹೊಡೆಯುತ್ತಿದ್ದರು, ನಾನು ಬಲಗೈಯನ್ನು ಅಡ್ಡ ತಂದಾಗ ನನ್ನ ಮುಂಗೈ ಕಟ್ಟಾಗಿರುತ್ತದೆ ಮತ್ತು ನನ್ನ ಬುಜದ ಚೆಪ್ಪೆಗೆ ಹೊಡೆದಿರುತ್ತಾರೆ. ನಂತರ ಮಗನಾದ ಚಾಸಾ-8 ಈತನಿಗೂ ಆರೋಪಿತರು ಕಟ್ಟಿಗೆಯಿಂದ ಹೊಡೆಯುತ್ತಿರುವಾಗ ನಮ್ಮ ಕೂಲಿ ಆಳುಗಳಾದ ಚಾಸಾ-4 ರಿಂದ 6 ರವರು ಬಂದು ಬಿಡಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಇನ್ನೊಬ್ಬ ಮಗನಾದ ಚಾಸಾ-9 ರವರು

ಊಟ ತೆಗೆದುಕೊಂಡು ಹೊಲಕ್ಕೆ ಬಂದನು, ಅವನಿಗೂ ಸಹಿತ ಆರೋಪಿತರು ನಂ.2 ಮತ್ತು 10 ನೇ ಆರೋಪಿತರು ಕಟ್ಟಿಗೆಯಿಂದ ಹೊಡೆದು ನನ್ನ ಮಗನ ಬಲಗೈ ಮುರಿದಿರುತ್ತಾರೆ. ನಂತರ ಹೊನ್ನಪ್ಪ ಎನ್ನುವವನು ಸಹಿತ ಜಗಳ ಬಿಡಿಸಿರುತ್ತಾನೆ. ಆರೋಪಿತರು ನಮ್ಮ ವಿರುದ್ದ ಏನದರೂ ಪ್ರಕರಣ ಹಾಕಿದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವದ ಬೇದರಿಕೆ ಹಾಕಿರುತ್ತಾರೆ. ಆರೋಪಿತರು ನಮಗೆ ಬೋಸೂಡಿ ಮಗನೆ, ರಂಡಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಾನು ಪೋಲೀಸ ಠಾಣೆಗೆ ಹೋಗಿದ್ದು, ಪೋಲೀಸರು ನನ್ನನ್ನು ಕೆಂಭಾವಿ ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ಅಲ್ಲಿಂದ ಕಲಬುರಗಿ ಜಯದೇವ ಅಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿರುತ್ತಾರೆ. ನಂತರ ನಾನು ಪೋಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಈ ನೋಡುತ್ತಿರುವ ಸಹಿ ನನ್ನದೇ ಇರುತ್ತದೆ. ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

02. ಪೋಲೀಸರು ಎರಡು ದಿನಗಳನ ನಂತರ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರು ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚಾಮೆಯನ್ನು ಬೆಳಿಗ್ಗೆ 10 ರಿಂದ 11 ಗಂಟೆಯ ಅವಧಿಯಲ್ಲಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಮೊನ್ನೆ ಮೊಹರಂ ಆದ ನಂತರ ಆರೋಪಿತರು ನಮ್ಮ ಮನೆಗೆ ಬಂದು ಈ ಪ್ರಕರಣದಲ್ಲಿ ನೀನು ಸಾಕ್ಷಿ ಹೇಳಿಕದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೇದರಿಕೆ ಹಾಕಿರುತ್ತಾರೆ. ಈ ಕುರಿತು ನಾನು ಕೆಂಭಾವಿ ಪೋಲೀಸ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ ಮತ್ತು ನಮ್ಮನ್ನು ಪೋಲೀಸ ಠಾಣೆಯಲ್ಲಿ, ಪೋಲೀಸರ ಸಮಕ್ಷಮ ನಮ್ಮನ್ನು ಹೊಡೆದಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಬಡಿಗೆಗಳಿಂದ ಆರೋಪಿತರು ನಮ್ಮನ್ನು ಹೊಡೆದಿರುತ್ತಾರೆ.

03. ನನ್ನ ಹೆಸರು ಖಾದರಬಾಷಸಾಬ ಮತ್ತು ಬಾಷಾಸಾಬ ಎಂದು ಎರಡೂ ಹೆಸರಿನಿಂದ ನನ್ನನ್ನು ಕರೆಯುತ್ತಾರೆ ಎಂದು ಮರುಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ.ಎ.ಎಸ್ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸದರಿ ಪ್ರಕರಣ ಕ್ರಿಮಿನಲ್ ಪ್ರಕರಣವಾಗಿದ್ದರಿಂದ, ಸದರಿಯವರ ಮನವಿಯನ್ನು ತೀರಿಸ್ಕರಿಸಿ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.